ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಅನುಬಂಧ 'ಅ'ನಲ್ಲಿ ನೀಡಿದೆ. (ಪ್ರಶ್ನೆ ಸಂಖ್ಯೆ 2931ರಲ್ಲಿ ನೀಡಿದೆ).

ಆ) ಆರ್.ಐ.ಡಿ.ಎಫ್-2 ರಡಿಯಲ್ಲಿ ಈವರೆಗೆ 61 ಕಾಮಗಾರಿಗಳು ಪೂರ್ಣಗೊಂಡಿದ್ದು, ತಾಲ್ಲೂಕುವಾರು ಮಾಹಿತಿಯನ್ನು ಅನುಬಂದ 'ಆ'ನಲ್ಲಿ ನೀಡಿದೆ. ಆರ್.ಐ.ಡಿ.ಎಫ್.3 ಮತ್ತು 4 ರಡಿಯಾವುದೇ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ. ಬಾಕಿ ಕಾಮಗಾರಿಗಳನ್ನು ಸಂಖ್ಯೆಗಳನ್ನೂ ಅನುಬಂಧ 'ಅ'ನಲ್ಲಿ ನೀಡಿದೆ.

ದಿನಾಂಕ 3.11.1998ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

ಚಿಕ್ಕನಾಯಕನಹಳ್ಳಿ ಹಂದನಕೆರೆಗೆ ಪೋಲೀಸ್ ಠಾಣೆ

489 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕನಾಯಕನಹಳ್ಳಿಯ ಹಂದನಕೆರೆಗೆ ಒಂದು ಪೋಲೀಸ್ ಠಾಣೆ ಬೇಕೆಂದು ಅನೇಕ ವರ್ಷಗಳಿಂದ ಒತ್ತಡ ಮಾಡುತ್ತಿರುವುದು ಸರ್ಕಾರಕ್ಕೆ ತಿಳಿದಿಲ್ಲವೇ?*

ಆ) *ಹಾಗಿದ್ದಾಗ್ಯೂ ಅಲ್ಲಿ ಒಂದು ಪೋಲೀಸ್ ಠಾಣೆ ಮಾಡದಿರಲು ಕಾರಣವೇನು?*

ಇ) *ಈ ವರ್ಷವೇ ಆದ್ಯತೆಯ ಮೇರೆಗೆ ಅಲ್ಲಿ ಒಂದು ಪೋಲೀಸ್ ಠಾಣೆ ಆರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಹೌದು.

ಆ) 1997-98ರಲ್ಲಿ 11 ಪೋಲೀಸ್ ಠಾಣೆಗಳಿಗೆ ಮಂಜೂರಾತಿ ನೀಡಿದಾಗ ಇದನ್ನು ಪರಿಶೀಲಿಸಲಾಗಿದ್ದಿತು. ಆದರೆ ಹಣಕಾಸಿನ ಕೊರತೆಯಿಂದಾಗಿ ಮಂಜೂರು ಮಾಡಲಾಗಲಿಲ್ಲ.

ಇ) ಪ್ರಸ್ತುತ ವರ್ಷದ ಹೊಸ ಠಾಣೆಗಳನ್ನು ತೆರೆಯುವ ಪ್ರಸ್ತಾವನೆಯೊಂದಿಗೆ ಹಂದನಕೆರೆ ಠಾಣೆಯ ಬಗೆಗೂ ಪುನಃ ಪರಿಗಣಿಸಲಾಗುವುದು.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಬ್-ಸ್ಟೇಷನ್‌ಗಳ ಸ್ಥಾಪನೆ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ

490 - ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕ್ರಮಬದ್ಧ ವಿದ್ಯುತ್ ಸರಬರಾಜಿಗಾಗಿ ಹೊಸ ವಿದ್ಯುತ್ ಸಬ್ ಸ್ಟೇಷನ್‌ಗಳನ್ನು ಮತ್ತು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಸರ್ಕಾರವು ಸ್ಥಾಪಿಸಿದೆಯೇ?*

ಅ) ಹಾಗಿದ್ದಲ್ಲಿ 1998-99ರ ವರ್ಷದಲ್ಲಿ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಎಷ್ಟು ಹೊಸ ಸಬ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುವುದು?

ಇ) ಮೇಲ್ಕಂಡ ತಾಲ್ಲೂಕಿನಲ್ಲಿ ಎಷ್ಟು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು 1998-99ರ ವರ್ಷದಲ್ಲಿ ಸ್ಥಾಪಿಸಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಇಲ್ಲ. ಮೊಳಕಾಲ್ಮೂರು ತಾಲ್ಲೂಕು ಈಗಾಗಲೇ ಮೂರು 66:11 ಕೆ.ವಿ. ವಿದ್ಯುತ್ ಉಪಕೇಂದ್ರಗಳನ್ನು ಹೊಂದಿದ್ದು, ಇವು ಹಾನಗಲ್, ರಾಂಪುರ ಮತ್ತು ಬಿ.ಜಿ. ಕೆರೆಗಳಲ್ಲಿವೆ ಮತ್ತು ಈ 66:11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳು ಪ್ರಸ್ತುತ ಓವರ್ ಲೋಡ್ ಆಗಿರುವುದಿಲ್ಲ. ಆದುದರಿಂದ ಪ್ರಸ್ತುತ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಯಾವುದೇ ಹೊಸ ವಿದ್ಯುತ್ ಸಬ್ ಸ್ಟೇಷನ್‌ಗಳ ಸ್ಥಾಪನೆಗೆ ಪ್ರಸ್ತಾವನೆಯು ಇರುವುದಿಲ್ಲ.

ಆ) ಇದು ಉದ್ಭವಿಸುವುದಿಲ್ಲ.

ಇ) ಇದು ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಿಂದ ಬರುವ ಆದಾಯ

491 - ಶ್ರೀ ಎನ್. ಶಿವಣ್ಣ (ತುಮಕೂರು) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಿಂದ 1995-96ರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು?

ಆ) ತುಮಕೂರು ಜಿಲ್ಲೆಯಲ್ಲಿ ಅಧಿಕೃತವಾಗಿ ನೋಂದಾಯಿಸಲಾದ ಸಾರಾಯಿ ಕೇಂದ್ರಗಳೆಷ್ಟು? ಇದರ ಹೊರತಾಗಿ ಅನಧಿಕೃತವಾಗಿ ಸಾರಾಯಿ ಮಾರಾಟ ಕೇಂದ್ರಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದ್ದಲ್ಲಿ ಅಂತಹ ಮಾರಾಟ ಕೇಂದ್ರಗಳೆಷ್ಟು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

ಅ) ತುಮಕೂರು ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯಿಂದ 1995-96ರಿಂದ ಸರ್ಕಾರಕ್ಕೆ ಬಂದ ಆದಾಯ ವಿವರಗಳು ಈ ಕೆಳಗಿನಂತಿರುತ್ತದೆ.

	ಕೋಟಿ ರೂ.ಗಳು
1995-96	28.65
1996-97	34.95
1997-98	31.99
1998-99	15.95

(ಸೆಪ್ಟೆಂಬರ್ 98ರವರೆಗೆ)